ಆರ್ಥಿಕ ಇಲಾಖೆ

# ವಿತ್ತೀಯ ಕಾರ್ಯನೀತಿ ಸಂಸ್ಥೆ (ವಿ.ಕಾ.ಸಂ.)




ಚೂಡನಪುರ ಅಂಚೆ, ಬೆಂಗಳೂರು–ಮೈಸೂರು ರಸ್ತೆ,
ಕೆಂಗೇರಿ, ಬೆಂಗಳೂರು–560060
ಕರ್ನಾಟಕ, ಭಾರತ
ದೂರವಾಣಿ : +91 80 26971234 / +91 80 26971111
ಟೆಲಿಫ್ಯಾಕ್ಸ್ : +91 80 22718585

## ಹಿನ್ನೆಲೆ ಮತ್ತು ಉದ್ದೇಶ

ಕರ್ನಾಟಕವು 2002ರಲ್ಲಿ ತನ್ನ ಆರ್ಥಿಕ ಜವಾಬ್ದಾರಿ ಕಾಯಿದೆಯನ್ನು (ಕೆಎಫ್ಆರ್ಎ) ಜಾರಿಗೊಳಿಸಿದ ಭಾರತದ ಮೊದಲ ರಾಜ್ಯವೆನಿಸಿದೆ. ಸದರಿ ಕಾಯಿದೆಯ ಪ್ರಕರಣ 4ರಲ್ಲಿ ಪ್ರತಿಪಾದಿಸಲಾದ ಹದಿನೇಳು ಆರ್ಥಿಕ ನಿರ್ವಹಣಾ ತತ್ವಗಳುಳ್ಳ ಪ್ರಕ್ರಿಯೆಗೆ ಸಂಬಂಧಿಸಿದ ವಿತ್ತೀಯ ಕಾರ್ಯನೀತಿ ಸಂಸ್ಥೆ ಸ್ಥಾಪಿಸುವಲ್ಲಿ ರಾಜ್ಯ ಸರ್ಕಾರದ ಬದ್ಧತೆಯನ್ನು ಸೂಚಿಸುತ್ತದೆ. ಯುಎಸ್ಎಐಡಿ–ಭಾರತ ಆರ್ಥಿಕ ಸುಧಾರಣಾ ಯೋಜನೆಯನ್ನು (2004–08) ಅನುಷ್ಠಾನಗೊಳಿಸುವ ವಿಷಯದಲ್ಲಿ ಆರ್ಥಿಕ ಕಾರ್ಯಾಚರಣೆಗಳಲ್ಲಿ ಸಾಮರ್ಥ್ಯ ವೃದ್ಧಿಸುವ ಸಲುವಾಗಿ ದೀರ್ಘಕಾಲಿಕ ಸಾಂಸ್ಥಿಕ ಸಹಾಯ ಪದ್ಧತಿ ಸೃಷ್ಟಿಸುವ ಅಗತ್ಯವನ್ನು ಗುರುತಿಸಲಾಗಿತ್ತು. ಆದ್ದರಿಂದ ಭಾರತ ಸರ್ಕಾರದ ಆರಂಭಿಕ ಅನುದಾನದೊಂದಿಗೆ ಕರ್ನಾಟಕ ಸರ್ಕಾರವು 2007ರಲ್ಲಿ ವಿತ್ತೀಯ ಕಾರ್ಯನೀತಿ ಸಂಸ್ಥೆಯನ್ನು ಸ್ಥಾಪಿಸಿತು. ಮುಖಪುಟದಲ್ಲಿ ಕಾಣಿಸುವ 'ವಿ.ಕಾ.ಸಂ.' ಚಿನ್ಹೆ ಹದಿನೇಳು ಆರ್ಥಿಕ ನಿರ್ವಹಣಾ ತತ್ವಗಳನ್ನು ಪ್ರತಿನಿಧಿಸುತ್ತದೆ. ಇದನ್ನು ಬೆಂಗಳೂರಿನ ಕರ್ನಾಟಕ ಚಿತ್ರಕಲಾ ಪರಿಷತ್ ವಿನ್ಯಾಸಗೊಳಿಸಿದೆ.

## ಪ್ರಮುಖ ಚಟುವಟಿಕೆಗಳು

- ರಾಷ್ಟ್ರೀಯ ಮತ್ತು ರಾಜ್ಯ ತರಬೇತಿ ನೀತಿ ಚೌಕಟ್ಟಿನೊಳಗೆ ಅಧಿಕಾರಿಗಳ ಸಾಮರ್ಥ್ಯ ಹೆಚ್ಚಿಸುವ ಸಲುವಾಗಿ ಇಚ್ಛಿತ ತರಬೇತಿ ಒದಗಿಸುವುದು ಮತ್ತು ಇದಕ್ಕೆ ಪ್ರಗತಿಶೀಲ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಅಂದಾಜು 150 ಸಾಮರ್ಥ್ಯಗಳನ್ನು (Competencies)ಗುರುತಿಸಲಾಗಿದೆ.
- ಹಣಕಾಸು ಯೋಜನೆ, ಯೋಜನೆಯ ಅನುಷ್ಠಾನ, ಸಾರ್ವಜನಿಕ ವೆಚ್ಚ ನಿರ್ವಹಣೆ, ಲಿಂಗಾಧಾರಿತ ಆಯವ್ಯಯ, ತೆರಿಗೆ, ಸಾರ್ವಜನಿಕ ಖಾಸಗಿ ಸಹಭಾಗಿತ್ವ, ಖರೀದಿ, ಗಂಡಾಂತರ ನಿರ್ವಹಣೆ, ಆಂತರಿಕ ನಿಯಂತ್ರಣಗಳು, ಸಾರ್ವಜನಿಕ ಸೇವೆಗಳ ಮೌಲ್ಯ, ಯೋಜನೆಯ ಅಂದಾಜು, ಆಸ್ತಿ ನಿರ್ವಹಣೆ, ಸರ್ಕಾರದ ಲೆಕ್ಕಪತ್ರ, ದತ್ತಾಂಶ ವಿಶ್ಲೇಷಣೆ, ಕಾರ್ಯಸಾಧನೆಯ ನಿರ್ವಹಣೆ, ಯೋಜನೆ ಮತ್ತು ಯೋಜನೇತರ ಯೋಜನೆಗಳ ನಿರ್ವಹಣಾ ಮಾಹಿತಿ ಪದ್ಧತಿ, ಸಾರ್ವಜನಿಕ ನೀತಿ ವಿಶ್ಲೇಷಣೆ ಇತ್ಯಾದಿಗಳಲ್ಲಿ ಸಂಬಂಧಪಟ್ಟ ಸಂಶೋಧನೆ ಕೈಗೊಳ್ಳುವುದು.
- ನೀತಿ ವಿಶ್ಲೇಷಣೆಗೆ ಉಪಯುಕ್ತ ಮತ್ತು ಸಮಂಜಸ ಕೈಪಿಡಿಗಳು, ಟೆಂಪ್ಲೇಟ್‌ಗಳು, ಉಪಕರಣಗಳು ಮತ್ತು ಪ್ರಮಾಣಗಳನ್ನು ತಯಾರಿಸುವುದು, ಹೂಡಿಕೆ ಅಂದಾಜು, ಗಂಡಾಂತರ ನಿರ್ವಹಣೆ, ಕಾರ್ಯಸಾಧನೆ ಮೇಲ್ವಿಚಾರಣಾ ವಿಧಾನಗಳು ಹಾಗೂ ಇವುಗಳನ್ನು ಸಂಸ್ಥೀಕರಣಗೊಳಿಸಲು ಗ್ರಾಹಕ ಇಲಾಖೆಗಳನ್ನು ಬೆಂಬಲಿಸುವುದು.
- ಸರ್ಕಾರಿ ಕಾರ್ಯಾಚರಣೆಗಳಲ್ಲಿ ಉತ್ತಮ ಆರ್ಥಿಕ ಆಡಳಿತಕ್ಕೆ ಹಣಕ್ಕಾಗಿ ಸೂಕ್ತ ಮೌಲ್ಯದ ನಿಟ್ಟಿನಲ್ಲಿ ಸಂಬಂಧಿಸಿದಂತೆ ಸಂಗ್ರಹಿಸುವುದು, ದಾಖಲಿಸುವುದು ಮತ್ತು ಮುಂದಿನ ಅತ್ಯುತ್ತಮ ಪದ್ಧತಿಗಳನ್ನು ಪ್ರಸಾರಿಸುವುದು.
- ಸಮರ್ಥ ತರಬೇತಿ ಮತ್ತು ಸಂಶೋಧನೆಯನ್ನು ಕಲ್ಪಿಸಲು ಅಗತ್ಯ ಭೌತಿಕ ಮೂಲಸೌಕರ್ಯ ಮತ್ತು ನಿರ್ವಹಣಾ ಸಂಪನ್ಮೂಲಗಳ ನಿರಂತರ ನಿರ್ವಹಣೆ.

- ಮುಂಜಾಗ್ರತಾ ಸಂಕೇತಗಳನ್ನು ಸೆರೆಹಿಡಿಯಲು ಮತ್ತು ದೃಢೀಕೃತ ವಿಶ್ಲೇಷಣೆಗಳಿಗೆ ದತ್ತಾಂಶವನ್ನು ಉನ್ನತೀಕರಿಸುವುದರೊಂದಿಗೆ ವಿತ್ತೀಯ ಕ್ರೂಢೀಕರಣಕ್ಕೆ ಸುದೀರ್ಘ ಬಾಳಿಕೆಯ ಸಾಂಸ್ಥಿಕ ಸಹಾಯವನ್ನು ಖಚಿತಪಡಿಸುವುದು.
- ಮೇಲ್ಕಂಡ ಚಟುವಟಿಕೆ ಮುಂದುವರಿಸಲು, ಇತರೆ ಉನ್ನತ ಕಲಿಕಾ ಸಂಸ್ಥೆಗಳು ಮತ್ತು ಲಾಭೋದ್ದೇಶವಿಲ್ಲದ ವೃತ್ತಿಪರ ಸಂಸ್ಥೆಗಳೊಂದಿಗೆ ಜೊತೆಗೂಡಿ ಕಾರ್ಯನಿರ್ವಹಿಸುವುದು.

ಹದಿನೈದು ವೃತ್ತಿಪರ ಬೋಧಕರನ್ನೊಳಗೊಂಡ ತಂಡದೊಂದಿಗೆ ಐದು ಕೇಂದ್ರಗಳ* ಮೂಲಕ ಮೇಲ್ಕಂಡ ಚಟುವಟಿಕೆಗಳನ್ನು ಕೈಗೊಳ್ಳಲು ವಿ.ಕಾ.ಸಂ. ಎದುರು ನೋಡುತ್ತಿದೆ. ಈ ವೃತ್ತಿಪರರನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸಾರ್ವಜನಿಕ ವಲಯ ಉದ್ಯಮಗಳು ಮತ್ತು ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಿಂದ ನಿಯೋಜನೆ ಮೇರೆಗೆ ಪಡೆಯಲಾಗುತ್ತದೆ. ಕಲಿಕೆಯು ಸಮಕಾಲೀನ ಮತ್ತು ಸಾಂಪ್ರದಾಯಿಕ ವಿಧಾನಗಳಾದ ಗುಂಪು ಚರ್ಚೆಗಳು, ಪಾತ್ರಾಭಿನಯ, ಬ್ರೇನ್ ಸ್ಟಾರ್ಮಿಂಗ್, ವಿಷಯ ಅಧ್ಯಯನ, ಸಹಭಾಗಿ ಉಪನ್ಯಾಸ, ಗುಂಪು ಕೆಲಸ, ಕ್ಷೇತ್ರ ಭೇಟಿ, ಇಂಟರ್ನ್‌ಶಿಪ್, ಯೋಜನಾ ಕೆಲಸ, ಆಸಕ್ತಿ ಗುಂಪುಗಳ ರಚನೆ ರೂಪದಲ್ಲಿರುತ್ತದೆ ಹಾಗೂ ಪ್ರಮುಖವಾಗಿ ವ್ಯವಸ್ಥೆಯೊಳಗೆ ಪ್ರಾತ್ಯಕ್ಷಿಕೆಯ ಯಶಸ್ಸಿನೊಂದಿಗೆ ಸಾರ್ವಜನಿಕ ಪರಿಚಾರಕರ ಮೂಲಕ ಮೇಲ್ವಿಚಾರಣೆ ಮಾಡಿಸುವುದು.

*ಕೇಂದ್ರಗಳು 1) ಸಾರ್ವಜನಿಕ ಸಂಪನ್ಮೂಲ ನಿರ್ವಹಣೆ (Public Resource Management) 2) ಸಾರ್ವಜನಿಕ ವೆಚ್ಚ ನಿರ್ವಹಣೆ ((Public Expenditure Management) 3) ಯೋಜನಾ ನಿರ್ವಹಣೆ (Project Management) 4) ತಂತ್ರಜ್ಞಾನ, ಮಾಹಿತಿ ವ್ಯವಸ್ಥೆ ಮತ್ತು ಅಂಕಿಅಂಶಗಳು Technology, Information System and Statistics 5) ವಿತ್ತೀಯ ಲೆಕ್ಕ ನಿರ್ವಹಣೆ ಮತ್ತು ವಿತ್ತೀಯ ವಿಕೇಂದ್ರೀಕರಣ (Fiscal Accountability and Fiscal Decentralization)

## ಮೂಲ ಸೌಕರ್ಯ

ವಿ.ಕಾ.ಸಂ. 5 ಎಕರೆ ವಿಸ್ತೀರ್ಣ ಹೊಂದಿದ್ದು ಬೆಂಗಳೂರಿನ ದಕ್ಷಿಣ ಭಾಗದಲ್ಲಿದ್ದು (ಕೆಂಗೇರಿ ಸಮೀಪ) ನಗರ ಮಧ್ಯದಿಂದ ಸುಮಾರು 20 ಕಿ.ಮೀ. ಅಂತರದಲ್ಲಿ ಮೈಸೂರಿಗೆ ಹೋಗುವ ಮಾರ್ಗದಲ್ಲಿ ನೆಲೆಗೊಂಡಿದೆ. ನಿರ್ದೇಶಕರ ವಸತಿ ಹಾಗೂ ಅಗತ್ಯ ಸಹಾಯಕ ಸಿಬ್ಬಂದಿ, ಬೋಧಕ ಸಿಬ್ಬಂದಿ ವಸತಿಗಳು ಮತ್ತು ಕಲಿಕೆಯ ಉಪಯೋಗಕ್ಕಾಗಿ ಏಳು ಕಟ್ಟಡಗಳನ್ನು ಒಳಗೊಂಡಿದೆ. ಆವರಣ ಹೊಂದಿರುವ ಇತರೆ ಸೌಲಭ್ಯಗಳು ಕೆಳಕಂಡಂತಿವೆ :

- 30 ಅಧಿಕಾರಿಗಳು ಭಾಗವಹಿಸುವಂತಹ ಸರಾಸರಿ ಸಾಮರ್ಥ್ಯದ ಏಳು ಚರ್ಚಾ / ತರಬೇತಿ ಕೊಠಡಿಗಳಿದ್ದು, ಇವುಗಳನ್ನು ಅಧಿಕಾರಿಗಳು ಕಲಿಕೆ ಮತ್ತು ಜ್ಞಾನ ಹಂಚಿಕೊಳ್ಳಲು ಅನುವಾಗುವಂತೆ ವಿನ್ಯಾಸಗೊಳಿಸಲಾಗಿದೆ. ಪ್ರತಿ ಕೊಠಡಿಯು ಉತ್ತಮ ಗಾಳಿ, ಬೆಳಕು, ಆಸನ ವ್ಯವಸ್ಥೆಯಿಂದ ಕೂಡಿದ್ದು, ಸಮಕಾಲೀನ ಆಡಿಯೋ-ವಿಡಿಯೋ, ಇಂಟರ್‌ನೆಟ್ ಮತ್ತು ಲ್ಯಾನ್ ವ್ಯವಸ್ಥೆಯೊಂದಿಗೆ ನಿರ್ಮಾಣಗೊಂಡಿದೆ.
- ಸಾಂಪ್ರದಾಯಿಕ ಮತ್ತು ಡಿಜಿಟಲ್ ವ್ಯವಸ್ಥೆಯ ಒಂದು ವಿಶಿಷ್ಟ ಗ್ರಂಥಾಲಯ, ಪ್ರತಿ ದಿನದ 24 ಗಂಟೆಯು ಗ್ರಂಥಾಲಯ ಸೇವೆ ದೊರಕಿಸುವ ಸಲುವಾಗಿ ಚರ್ಚಾ ಕೊಠಡಿಗಳು, ವಸತಿ ನಿಲಯಗಳು ಮತ್ತು ಅತಿಥಿ ಗೃಹದಲ್ಲಿ ಲ್ಯಾನ್ ಸೌಲಭ್ಯ ಕಲ್ಪಿಸಲಾಗುತ್ತಿದೆ.

- ಕಲಿಕಾ ಸಾಮಗ್ರಿಗಳನ್ನು ಆಂತರಿಕವಾಗಿ ತಯಾರಿಸಲು ಧ್ವನಿ ವ್ಯವಸ್ಥೆಯ ಒಂದು ಸ್ಟುಡಿಯೋ ಹಾಗೂ ಕೆಎಸ್‌ಡಬ್ಲ್ಯುಎಎನ್ (KSWAN) ಬಳಸಿಕೊಂಡು ತಾತ್ವಿಕ ವಿಧಾನ (Virtual Mode) ಮತ್ತು ದತ್ತಾಂಶ ಪ್ರಸರಣದ (Data Dissemination ) ಮೂಲಕ ಕಲಿಕೆಗೆ ಅವಕಾಶ ಕಲ್ಪಿಸಲಾಗುತ್ತಿದೆ.
- ಪ್ರತಿ ಕೊಠಡಿಯಲ್ಲಿ 40 ವ್ಯಕ್ತಿಗಳಿಗೆ ಸ್ಥಳಾವಕಾಶ ಇರುವಂತಹ ಎರಡು ಸಮ್ಮೇಳನ ಕೊಠಡಿಗಳು. ಗುಂಪು ಚರ್ಚೆಗೆ ನಾಲ್ಕು ಸಮಿತಿ ಕೊಠಡಿಗಳು.
- ಸುಮಾರು 180 ಆಸನಗಳನ್ನೊಳಗೊಂಡ ಮತ್ತು ವೇದಿಕೆಯಲ್ಲಿ 10 ವ್ಯಕ್ತಿಗಳು ಆಸೀನರಾಗಬಹುದಾದ ಸಾಮರ್ಥ್ಯ ಹೊಂದಿರುವ ಸಭಾಂಗಣ.
- ಶ್ರವಣ–ದೃಶ್ಯ ವ್ಯವಸ್ಥೆಯನ್ನು ಹೊಂದಿರುವ 80 ಆಸನವುಳ್ಳ ಮಂಡಳಿ ಕೊಠಡಿ
- ಅತಿಥಿ ಗೃಹವು ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಇತರೆ ಸಂದರ್ಶಕರು ಉಳಿದುಕೊಳ್ಳಲು ಹಾಗೂ ವಿ.ಕಾ.ಸಂ. ಸೇವೆಗಳನ್ನು ಬಳಸುವ ಮತ್ತು ಉತ್ತೇಜಿಸುವವರಿಗಾಗಿ 12 ಆಧುನಿಕ ಕೊಠಡಿಗಳನ್ನು ಒಳಗೊಂಡಿದೆ.
- ವಸತಿ ನಿಲಯವು 140 ವ್ಯಕ್ತಿಗಳು ಉಳಿದುಕೊಳ್ಳಲು 70 ಕೊಠಡಿಗಳನ್ನು ಹೊಂದಿದೆ ಮತ್ತು 150 ಮಂದಿ ಊಟ ಮಾಡಬಹುದಾದಂತಹ ವಿಶಾಲವಾದ ಭೋಜನ ಶಾಲೆಯನ್ನು ಒಳಗೊಂಡಿದೆ.

ಆವರಣದ ಒಳಾಂಗಣ ರಸ್ತೆಗಳ ಉದ್ದ ಸುಮಾರು 700 ಮೀಟರ್‌ಗಳು. ಭೂದೃಶ್ಯವು (Landscaping) ಸುಮಾರು 2 ಎಕರೆಗೆ ವಿಸ್ತರಿಸಲ್ಪಟ್ಟಿದೆ ಮತ್ತು ಮರು ಬಳಸಲ್ಪಡುವ ನೀರಿನ ವ್ಯವಸ್ಥೆ ಕಲ್ಪಿಸಲಾಗಿದೆ. ರಸ್ತೆಗಳ ಉದ್ದಕ್ಕೂ ಸುಮಾರು 80 ಕಾರುಗಳನ್ನು ನಿಲುಗಡೆಗೊಳಿಸಬಹುದಾಗಿದೆ. ಈ ಎಲ್ಲಾ ಸೌಲಭ್ಯಗಳನ್ನು ಕರ್ನಾಟಕ ಸರ್ಕಾರದ ಲೋಕೋಪಯೋಗಿ ಇಲಾಖೆಯು ವಿನ್ಯಾಸಗೊಳಿಸಿದೆ ಮತ್ತು ನಿರ್ವಹಿಸುತ್ತಿದೆ.

ಹೆಚ್ಚಿನ ವಿವರಗಳಿಗೆ

ನಮ್ಮನ್ನು ಭೇಟಿ ಮಾಡಿ : **www.fpibangalore.gov.in**

